# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/164/ಸಾ.ಸ/2022-23

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 07.07.2022

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 27.06.2022 ರಂದು ಜರುಗಿದ 164ನೇ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 06.07.2022

******

ದಿನಾಂಕ 27.06.2022 ರಂದು ಮಧ್ಯಾಹ್ನ 2.30 ಗಂಟೆಗೆ ಜರುಗಿದ 164ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/164/ಸಾ.ಸ/2022-23

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 07-07-2022

**ದಿನಾಂಕ 27-06-2022 ರಂದು ಮಧ್ಯಾಹ್ನ 2.30 ಗಂಟೆಗೆ ಬೋರ್ಡ್ ರೂಮ್, ಆಡಳಿತ ಕಛೇರಿ, ಜ್ಞಾನಭಾರತಿ, ಬೆಂಗಳೂರು-560 056, ಇಲ್ಲಿ ಜರುಗಿದ 164 ನೇ ಸಿಂಡಿಕೇಟ್ ಸಭೆಯ ನಡವಳಿಗಳು.**

<u>ಹಾಜರಾದ ಸದಸ್ಯರು:</u>

| | | | |
|---|---|---|---|
| 1. | ಡಾ. ಸಿಂಥಿಯಾ ಮಿನೇಜ಼ಸ್<br>ಕುಲಪತಿಗಳು, (ಪ್ರಭಾರ) | - | ಸಭಾಧ್ಯಕ್ಷರು |
| 2. | ಪ್ರೊ. ಯು.ವಿ ಚಂದರಗಿ,<br>ಜಂಟಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ<br>(ಆಯುಕ್ತರ ಪರವಾಗಿ) | - | ಸದಸ್ಯರು |
| 3. | ಡಾ. ಸುಧಾಕರ್. ಎಚ್ | - | ಸದಸ್ಯರು |
| 4. | ಶ್ರೀ ಎಂ. ಉದಯಕುಮಾರ್ | - | ಸದಸ್ಯರು |
| 5. | ಶ್ರೀ ಕುಮಾರ ಟಿ, | - | ಸದಸ್ಯರು |
| 6. | ಡಾ. ಧನಂಜಯ ಬಿ.ಆರ್ | - | ಸದಸ್ಯರು |
| 7. | ಡಾ. ಎಂ. ಶೈಲಜ | - | ಸದಸ್ಯರು |
| 8. | ಡಾ. ಸುಧೀರ್ ಪೈ | - | ಸದಸ್ಯರು |
| 9. | ಡಾ. ಗೋವಿಂದರಾಜು | - | ಸದಸ್ಯರು |
| 10. | ಶ್ರೀ ಗೋಪಿನಾಥ | - | ಸದಸ್ಯರು |
| 11. | ಡಾ.ಎಂ.ವಿ ಆಶಾ | - | ಸದಸ್ಯರು |
| 12. | ಶ್ರೀ ಪ್ರೇಮ್ ಸೋಹನ್‌ಲಾಲ್ | - | ಸದಸ್ಯರು |
| 13. | ಪ್ರೊ. ಟಿ.ವಿ. ರಾಜು | - | ಸದಸ್ಯರು |
| 14. | ಶ್ರೀ ವಿದೇಯ ಬೆಳಗೋಡೆ ಶ್ರೀಕಂಠ | - | ಸದಸ್ಯರು |
| 15. | ಪ್ರೊ. ಜಯಕುಮಾರ್ ಜಿ. ರೆಡ್ಡಿ | - | ಸದಸ್ಯರು |
| 16. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 17. | ಪ್ರೊ. ಎಂ ಕೊಟ್ರೇಶ್,<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಎರಡು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

Cynthia Menezes
07/07/2022

ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ ಸಭೆಯನ್ನು ನಡೆಸಿಕೊಡಬೇಕೆಂದು ಕುಲಪತಿಗಳಲ್ಲಿ ಕೋರಿದರು.

ಕುಲಪತಿಗಳು ಸದಸ್ಯರೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

ಈ ಹಂತದಲ್ಲಿ ಡಾ. ಗೋವಿಂದರಾಜು ರವರು ಮಾತನಾಡಿ ಸಿಂಡಿಕೇಟ್ ಸಭೆಯನ್ನು ನಡೆಸುವ ಬಗ್ಗೆ ಕರ್ನಾಟಕ ರಾಜ್ಯಪಾಲರ ಸಚಿವಾಲಯದ ಮಾರ್ಗದರ್ಶಿ ಪತ್ರ ಸಂಖ್ಯೆ GS 11 BUM 2021, ದಿನಾಂಕ 27.10.2021 ರ ಪ್ರತಿಯನ್ನು ಮಾನ್ಯ ಕುಲಪತಿಗಳಿಗೆ ನೀಡಿ ಸಭೆಯನ್ನು ಸದರಿ ಮಾರ್ಗಸೂಚಿಯಂತೆ ನಡೆಸಬೇಕೆಂದು ತಿಳಿಸಿದರು. ಅದರಂತೆ, ಸಭೆ ಮುಕ್ತಾಯವಾದ ನಂತರ ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯಗಳನ್ನು ಓದುವಂತೆ ತಿಳಿಸಿದರು.

ಕುಲಪತಿಗಳು ಮಾತನಾಡಿ ಮಾರ್ಗದರ್ಶಿಯಂತೆ ಸಭೆಯನ್ನು ನಡೆಸಲಾಗುವುದು ಎಂದು ತಿಳಿಸಿದರು. ಈ ಮಧ್ಯೆ ಕೆಲವು ವಿದ್ಯಾರ್ಥಿಗಳು ಸಭೆಗೆ ಪ್ರವೇಶಿಸಿ ಮ್ಯಾನೇಜ್‌ಮೆಂಟ್ ವಿಭಾಗದಲ್ಲಿ ಪಿ.ಎಚ್.ಡಿ ಪ್ರವೇಶದ ಸಮಸ್ಯೆಯ ಬಗ್ಗೆ ಪತ್ರವನ್ನು ನೀಡಿ ಸಮಸ್ಯೆಯನ್ನು ಬಗೆಹರಿಸಿಕೊಡುವಂತೆ ಮನವಿ ಮಾಡಿದರು. ವಿದ್ಯಾರ್ಥಿಗಳಿಗೆ ಪಿ.ಎಚ್.ಡಿ ಪ್ರವೇಶವನ್ನು ನಿರಾಕರಿಸಿರುವ ಬಗ್ಗೆ ಎಲ್ಲಾ ಸದಸ್ಯರು ಸುದೀರ್ಘ ಚರ್ಚೆ ನಡೆಸಿದ ನಂತರ ಇದನ್ನು ಕೊನೆ ಅವಕಾಶ ಎಂದು ಪರಿಗಣಿಸಬೇಕೆಂದು ಶ್ರೀ ಪ್ರೇಮ್ ಸೋಹನ್‌ಲಾಲ್ ರವರು ಹೇಳಿದರು. ಡಾ. ಚಂದರಗಿಯವರು ಈ ಬಗ್ಗೆ ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರು ನೇರವಾಗಿ ಕಾನೂನು ಸಲಹೆಗಾರರಿಂದ ಅಭಿಪ್ರಾಯ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಕುಲಪತಿಗಳು ಮಾತನಾಡಿ ಈ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಹಾಗೂ ಕಾನೂನು ಸಲಹೆ ಪಡೆದು ವಿವರಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ನಿರ್ಣಯ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು

ಶ್ರೀ ಎಂ. ಉದಯಕುಮಾರ್ ರವರು ಮಾತನಾಡಿ ಬೆಂಗಳೂರು ವಿಶ್ವವಿದ್ಯಾಲಯದ ವಕೀಲರಾದ ಶ್ರೀ ರಾಜೇಂದ್ರಕುಮಾರ್ ಸುಂಘೆ ಅವರು ವಿಶ್ವವಿದ್ಯಾಲಯದ ಪರವಾಗಿ ಸಮರ್ಥವಾಗಿ ನ್ಯಾಯಾಲಯದಲ್ಲಿ ವಾದಿಸದ ಕಾರಣ ಹಲವಾರು ಕೇಸುಗಳನ್ನು ಸೋತಿರುವುದರಿಂದ ಅವರನ್ನು ವಿಶ್ವವಿದ್ಯಾಲಯದ ವಕೀಲರ ಪಟ್ಟಿಯಿಂದ ಕೈಬಿಡಬೇಕೆಂದು ತಿಳಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ ಬೆಂಗಳೂರು ವಿಶ್ವವಿದ್ಯಾಲಯದ ವಕೀಲರ ಪಟ್ಟಿ (advocate panel) ಅನ್ನು ಸಂಪೂರ್ಣವಾಗಿ ಬದಲಾಯಿಸಬೇಕೆಂದು ಅಭಿಪ್ರಾಯಪಟ್ಟರು. ಕುಲಸಚಿವರು ಈಗಾಗಲೇ ಪ್ಯಾನಲ್‌ನಲ್ಲಿರುವ ವಕೀಲರಿಗೆ ಸಾಕಷ್ಟು ಕೇಸ್‌ಗಳನ್ನು ನೀಡಿರುವುದರಿಂದ ಮಧ್ಯದಲ್ಲಿ ವಕೀಲರನ್ನು ಬದಲಾಯಿಸಿದರೆ ತೊಂದರೆಯಾಗಬಹುದು ಎಂದು

ತಿಳಿಸಿದರು. ಪ್ರೊ. ಟಿ.ವಿ. ರಾಜುರವರು ವಕೀಲರಿಗೆ ನೀಡಿರುವ ಪ್ರಸ್ತುತ ಕೇಸುಗಳನ್ನು ವಾಪಸ್ಸು ಪಡೆದು ಬೇರೆ ವಕೀಲರಿಗೆ ವಹಿಸಿ ಕೊಡಬಹುದು ಹಾಗೂ ಸಂಬಂಧಪಟ್ಟ ವಕೀಲರಿಗೆ ಈ ಬಗ್ಗೆ ನಿರಾಕ್ಷೇಪಣಾ ಪತ್ರ (No due certificate) ನೀಡಲು ಸಹ ತಿಳಿಸಬಹುದಾಗಿದೆ ಎಂದು ಸಲಹೆ ನೀಡಿದರು.

ಕುಲಪತಿಗಳು ಮಾತನಾಡಿ ವಕೀಲರ ಪಟ್ಟಿಯನ್ನು ಪರಿಷ್ಕರಿಸುವ ಬಗ್ಗೆ ಈಗಾಗಲೇ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿ ಕೂಡಲೇ ಸಭೆ ಸೇರಿ ವಕೀಲರ ಪಟ್ಟಿಯನ್ನು ಪರಿಷ್ಕರಿಸುವ ಬಗ್ಗೆ ಚರ್ಚಿಸಿ ವರದಿ ನೀಡುವಂತೆ ತಿಳಿಸಿದರು. ಈ ಬಗ್ಗೆ ಸಭೆ ಕರೆಯಲು ಸಿಬ್ಬಂದಿ ವಿಭಾಗ-1 ಕ್ಕೆ ಸೂಚಿಸಲಾಗುವುದೆಂದು ತಿಳಿಸಿದರು ಹಾಗೂ ಸಿಂಡಿಕೇಟ್ ಸದಸ್ಯರೆಲ್ಲರ ನಿರ್ಣಯದಂತೆ ಶ್ರೀ ರಾಜೇಂದ್ರಕುಮಾರ್ ಸುಂಫೆ ರವರನ್ನು ವಕೀಲರ ಪಟ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆ ಮಾಡಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು.

***Proceedings of the 164th meeting of the Syndicate held on 27.06.2022***

**Item No. 01:** ದಿನಾಂಕ 11-01-2022 ರಂದು ಜರುಗಿದ 162ನೇ ಸಿಂಡಿಕೇಟ್ ಸಭೆ, ದಿನಾಂಕ: 19-01-2022ರಂದು ಜರುಗಿದ 162ನೇ ಮುಂದೂಡಲ್ಪಟ್ಟ ಸಿಂಡಿಕೇಟ್ ಸಭೆ, ದಿನಾಂಕ 18.01.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆ, ದಿನಾಂಕ 09.02.2022 ರಂದು ಜರುಗಿದ 163ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 11.04.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ (1-19) ಪುಟದ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

**ಮತ್ತು**

**ವಿಷಯ ಸಂಖ್ಯೆ 02:** ದಿನಾಂಕ 11-01-2022 ಜರುಗಿದ 162ನೇ ಸಿಂಡಿಕೇಟ್ ಸಭೆ, ದಿನಾಂಕ: 19-01-2022ರಂದು ಜರುಗಿದ 162ನೇ ಮುಂದೂಡಲ್ಪಟ್ಟ ಸಿಂಡಿಕೇಟ್ ಸಭೆ, ದಿನಾಂಕ 18.01.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆ, ದಿನಾಂಕ 09.02.2022 ರಂದು ಜರುಗಿದ 163ನೇ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 11.04.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ (1-19) ಪುಟದ ನಡಾವಳಿಗಳ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

***ನಿರ್ಣಯ:***

ಪ್ರೊ. ಟಿ.ವಿ ರಾಜುರವರು ಮಾತನಾಡಿ ವಿಶ್ವವಿದ್ಯಾಲಯ ರಚಿಸಿರುವ ಯಾವುದೇ ಉಪ ಸಮಿತಿಗಳ ಸಭೆಯನ್ನು ಕರೆಯದಿರುವ ಬಗ್ಗೆ ಆಕ್ಷೇಪಣೆ ವ್ಯಕ್ತ ಪಡಿಸಿದರು. ಅವರು ಮುಂದುವರೆದು ಈ ಹಿಂದೆ ನಡೆದಿರುವ ತಪ್ಪುಗಳನ್ನು ಸಿಂಡಿಕೇಟ್ ಸದಸ್ಯರು ಎತ್ತಿ ಹಿಡಿದಿದ್ದಾರೆ ಆದಕಾರಣ, ಮುಂದೆ ನಡೆಯುವ ಕೆಲಸ ಕಾರ್ಯಗಳು / ಕಾರ್ಯಕ್ರಮಗಳ ಬಗ್ಗೆ ಯೋಚಿಸೋಣ ಎಂದು ತಿಳಿಸಿದರು. ಡಾ. ಗೋವಿಂದರಾಜು ರವರು ಮಾತನಾಡಿ ಪರಿಶಿಷ್ಟ ಜಾತಿ, ಪಂಗಡ ಕಲ್ಯಾಣ ಸಮಿತಿಯು ಎರಡೂವರೆ ವರ್ಷಗಳಿಂದ ಸಭೆಯನ್ನು ಕರೆಯದಿರುವ ಬಗ್ಗೆ ಆಕ್ಷೇಪಿಸಿದರು ಹಾಗೂ ಪರಿಶಿಷ್ಟ ಜಾತಿ, ಪಂಗಡ ಕೋಶಕ್ಕೆ ಪೂರ್ಣಾವಧಿಯ

Cynthia Menzes
27/07/2022

ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಹದಿನೈದು ದಿನಗಳೊಳಗೆ ಸಭೆಯನ್ನು ಕರೆಯಬೇಕೆಂದು ಆಗ್ರಹಿಸಿದರು.

ಶ್ರೀ ಎಂ. ಉದಯಕುಮಾರ್, ಡಾ. ಗೋವಿಂದರಾಜು ಮತ್ತು ಶ್ರೀ ಪ್ರೇಮ್ ಸೋಹನ್‌ಲಾಲ್ ರವರುಗಳು ಮಾತನಾಡಿ ಈ ಸಭೆಗಳಲ್ಲಿ ತೆಗೆದುಕೊಂಡ ನಿರ್ಣಯಗಳು ಕಾನೂನಾನ್ಮಕವಾಗಿದ್ದರೆ ಸದಸ್ಯರೆಲ್ಲರ ಒಪ್ಪಿಗೆಯೂ ಇದೆ. ಆದರೆ, ಕಾನೂನಾತ್ಮವಾಗಿಲ್ಲದಿರುವ ವಿಷಯಗಳನ್ನು ಪರಿಶೀಲನೆ ಮಾಡಬೇಕೆಂದು ತಿಳಿಸಿದರು.

ಡಾ. ಸುಧಾಕರ್.ಎಚ್ ರವರು ಮಾತನಾಡಿ ದಿನಾಂಕ 09.02.2022 ಮತ್ತು 11.04.2022 ರ ಸಿಂಡಿಕೇಟ್ ಸಭೆಗಳ ನಿರ್ಣಯಗಳ ಬಗ್ಗೆ ಘನತೆವೆತ್ತ ರಾಜ್ಯಪಾಲರಿಗೆ ಪತ್ರ ಬರೆದಿದ್ದು, Circulation ಗೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮ ಅಥವಾ ಅಧಿನಿಯಮ 2000 ದಲ್ಲಿ ಯಾವುದೇ ಅವಕಾಶವಿರುವುದಿಲ್ಲವೆಂದು ತಿಳಿಸಿದರು. ಮಾನ್ಯ ಕುಲಸಚಿವರು ಮಾತನಾಡಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಗೆ ಒಂದು ಪತ್ರವನ್ನು ಬರೆಯುವುದಾಗಿ ತಿಳಿಸಿದರು.

***ನಿರ್ಣಯ:***

ದಿನಾಂಕ 09.02.2022 ಮತ್ತು 11.04.2022 ರ ಸಿಂಡಿಕೇಟ್ ಸಭೆಗಳ ನಿರ್ಣಯಗಳ ಬಗ್ಗೆ ಪರಿಶೀಲಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1. | ಒಬ್ಬರು ಪ್ರಾಧ್ಯಾಪಕರು | – ಸದಸ್ಯರು |
| | ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ | – ಸದಸ್ಯರು |
| 2. | ನಿವೃತ್ತ ನ್ಯಾಯಾಧೀಶರು | – ಸದಸ್ಯರು |
| 3. | ಜಂಟಿ ನಿರ್ದೇಶಕರು,<br>ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | – ಸದಸ್ಯರು |
| 4. | ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು | – ಸದಸ್ಯರು |



**ವಿಷಯ ಸಂಖ್ಯೆ 03:** Financial support to file patent by the Dr. J. Savitha, Professor, the Dept. of Microbiology and Biotechnology, Bangalore University, Bengaluru.

*Resolution:*

After detailed discussions, Syndicate resolved to ratify the action taken by the University in extending financial support to Dr. J Savitha, Professor, Department of Microbiology towards patent charges for filing her research work.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 04:** ಶ್ರೀ ಶಿವಶಂಕರ್.ಎಸ್, ದಿವಂಗತ ಮುನಿಯಮ್ಮಳ್ ಆರ್, ಸಹಾಯಕರು, ವಿಶ್ವವಿದ್ಯಾಲಯ ಆರೋಗ್ಯ ಕೇಂದ್ರ ಇವರ ಪುತ್ರ, ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ, ದಿವಂಗತ ಮುನಿಯಮ್ಮಳ್ ಆರ್, ಸಹಾಯಕರು, ವಿಶ್ವವಿದ್ಯಾಲಯ ಆರೋಗ್ಯ ಕೇಂದ್ರ ಇವರ ಪುತ್ರ ಶ್ರೀ ಶಿವಶಂಕರ್.ಎಸ್ ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿ ಎದುರು ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 05:** ದಿವಂಗತ ಶ್ರೀಮತಿ ವಿಜಯಲಕ್ಷ್ಮಿ.ಎಸ್, ಅನುಚರರು, ಮೈಕ್ರೋಬಯಾಲಜಿ ವಿಭಾಗ ಇವರ ಪುತ್ರ ಶ್ರೀ ಕೀರ್ತಿ ಮೂಲ ಭಾರತಿ, ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ, ದಿವಂಗತ ಶ್ರೀಮತಿ ವಿಜಯಲಕ್ಷ್ಮಿ.ಎಸ್, ಅನುಚರರು, ಮೈಕ್ರೋಬಯಾಲಜಿ ವಿಭಾಗ ಇವರ ಪುತ್ರ ಶ್ರೀ ಕೀರ್ತಿ ಮೂಲ ಭಾರತಿ ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿ ಎದುರು ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 06:** ಮೆ. ಎಂಪ್ಲಾಯ್‌ಮೆಂಟ್ ಬ್ಯೂರೋ, ಸಂಪಗಿರಾಮನಗರ, ಬೆಂಗಳೂರು ರವರಿಗೆ 2016 ಮೇ ಮತ್ತು ಜೂನ್ 2016 ತಿಂಗಳ ಭದ್ರತಾ ಸಿಬ್ಬಂದಿ ಬಾಕಿ ವೇತನದ ಬಗ್ಗೆ. ಸಮಿತಿಯು ನೀಡಿರುವ ಅಂತಿಮ ವರದಿಯ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ ಮೆ. ಎಂಪ್ಲಾಯ್‌ಮೆಂಟ್ ಬ್ಯೂರೋ ರವರಿಗೆ ಮೇ ಮತ್ತು ಜೂನ್ 2016 ನೇ ತಿಂಗಳ ಭದ್ರತಾ ಸಿಬ್ಬಂದಿ ಬಾಕಿ ವೇತನದ ಬಗ್ಗೆ ಡಾ. ಸುರೇಶ್ ನಾಡಗೌಡರ್, ಪ್ರೊ. ಟಿ.ವಿ. ರಾಜು, ಡಾ. ಹಸೀನ್ ತಾಜ್ ಇವರನ್ನೊಳಗೊಂಡ ಸಮಿತಿಯು ಸಲ್ಲಿಸಿರುವ ವರದಿಯನ್ನು ಅನುಮೋದಿಸಿ, ಸ್ಟಾರ್ ಎಂಪ್ಲಾಯ್‌ಮೆಂಟ್ ಬ್ಯೂರೋಗೆ ಸೂಕ್ತ ಉತ್ತರವನ್ನು ನೀಡುವಂತೆ ನಿರ್ಣಯಿಸಲಾಯಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 07:** ಸಾಮೂಹಿಕ ವಿಮಾ ಯೋಜನೆ 1981ರ ನಿಯಮವನ್ನು ವಿಶ್ವವಿದ್ಯಾಲಯದ ಶಿಕ್ಷಕ/ಶಿಕ್ಷಕೇತರ ನೌಕರರಿಗೆ ಅಳವಡಿಸಿಕೊಳ್ಳುವ ಬಗ್ಗೆ.

*ನಿರ್ಣಯ:*

ಶ್ರೀ ಪ್ರೇಮ್ ಸೋಹನ್‌ಲಾಲ್ ರವರು ಮಾತನಾಡಿ ಸಾಮೂಹಿಕ ವಿಮಾ ಯೋಜನೆಯನ್ನು ಶಿಕ್ಷಕ/ಶಿಕ್ಷಕೇತರ ನೌಕರರಿಗೆ ಸಹಾಯವಾಗುವಂತೆ ಅಳವಡಿಸಿಕೊಳ್ಳಲು ತಿಳಿಸಿ, ಹೊರಗುತ್ತಿಗೆ ಹಾಗೂ ದಿನಗೂಲಿ ನೌಕರರಿಗೂ ಸಹಾಯವಾಗುವಂತೆ ಕಾರ್ಮಿಕ ನ್ಯಾಯಾಲಯದ ನಿಯಮದಂತೆ ಅವಕಾಶವಿದ್ದರೆ ಸಾಮೂಹಿಕ ವಿಮೆಯನ್ನು ವಿಸ್ತರಿಸುವ ಬಗ್ಗೆ ವಿಶ್ವವಿದ್ಯಾಲಯ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ನೀಡಿದರು. ಚರ್ಚೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯದ ಖಾಯಂ ನೌಕರರಿಗೆ ಜನವರಿ 2019 ರಿಂದ ಪೂರ್ವಾನ್ವಯವಾಗುವಂತೆ ಸಾಮೂಹಿಕ ವಿಮಾ ಯೋಜನೆ 1981ರ ನಿಯಮವನ್ನು ಅಳವಡಿಸಿಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 08:** ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಗುತ್ತಿಗೆ ಆಧಾರದ ಮೇಲೆ ಚಾಲಕರನ್ನು ನೇಮಿಸಿಕೊಳ್ಳುವ ಬಗ್ಗೆ.

*ನಿರ್ಣಯ:*

ಶ್ರೀ ಗೋಪಿನಾಥ್ ರವರು ಮಾತನಾಡಿ ದೈಹಿಕ ಸಧೃಡತೆ ಇಲ್ಲದ ಖಾಯಂ ಚಾಲಕರಿಗೆ ಬೇರೆ ಕೆಲಸಗಳನ್ನು ನಿರ್ವಹಿಸುವಂತೆ ಸೂಚಿಸಲು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ನೌಕರರಿಗೂ ಶ್ರದ್ದೆಯಿಂದ ಕೆಲಸವನ್ನು ನಿರ್ವಹಿಸುವಂತೆ ಕ್ರಮವಹಿಸಬೇಕೆಂದು ತಿಳಿಸಿದರು. ಶ್ರೀ ಉದಯಕುಮಾರ್. ಎಂ ರವರು ಮಾತನಾಡಿ ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಸಂಬಂಧ ಒಂದು ಸಮಿತಿಯನ್ನು ರಚಿಸಬೇಕೆಂದು ತಿಳಿಸಿದರು.

ಚರ್ಚೆಯ ನಂತರ ಗುತ್ತಿಗೆ ಆಧಾರದ ಮೇಲೆ ಚಾಲಕರಾಗಿ ಕಾರ್ಯನಿರ್ವಹಿಸಲು ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಅಭ್ಯರ್ಥಿಗಳ ಹೆಸರುಗಳನ್ನು ಶಿಫಾರಸ್ಸು ಮಾಡಲು ಶ್ರೀ ಎಂ. ಉದಯಕುಮಾರ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 09:** ಐದು ವರ್ಷಗಳ ಸಂಶೋಧನಾ ಅವಧಿ ಪೂರ್ಣಗೊಂಡು 2016 ರ ಸಾಲಿನಲ್ಲಿ ಪ್ರವೇಶ ಪಡೆದ 51 ಸಂಶೋಧನಾ ವಿದ್ಯಾರ್ಥಿಗಳಿಗೆ ತಮ್ಮ ಪಿ.ಎಚ್.ಡಿ ಅಧ್ಯಯನ ಪೂರ್ಣಗೊಳಿಸಲು ಒಂದು ವರ್ಷದ ಹೆಚ್ಚುವರಿ ಅವಧಿಗೆ ಹಾಸ್ಟೆಲ್ ಹಾಗೂ ಇತರ ಸೌಲಭ್ಯ ವಿಸ್ತರಿಸುವ ಬಗ್ಗೆ.

*ನಿರ್ಣಯ:*

ಕೋವಿಡ್–19 ರ ಪ್ರಯುಕ್ತ, 05 ವರ್ಷದ ಒಳಗೆ ಸಂಶೋಧನೆಯನ್ನು ಪೂರ್ಣಗೊಳಿಸದ ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ 51 ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ಒಂದು ಬಾರಿ ಅವಕಾಶದಂತೆ ಡಿಸೆಂಬರ್ 2022 ರವರೆಗೆ ಊಟ ಮತ್ತು ವಸತಿಯನ್ನು ಮಾತ್ರ ನೀಡಲು ಸಿಂಡಿಕೇಟ್ ನಿರ್ಣಯಿಸಿತು. ಮುಂದುವರೆದು, ಇನ್ನು ಮುಂದೆ ಯಾವುದೇ ವಿದ್ಯಾರ್ಥಿಗಳಿಗೆ 05 ವರ್ಷಗಳ ಸಂಶೋಧನಾ ಅವಧಿ ಪೂರೈಸಿದ ನಂತರ ಯಾವುದೇ ಸೌಲಭ್ಯಗಳನ್ನು ಮುಂದುವರೆಸಬಾರದೆಂದು ಸಿಂಡಿಕೇಟ್ ತೀರ್ಮಾನಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 10:** ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಇವರಿಗೆ 10 ರಿಂದ 15 ಎಕರೆ ಜಮೀನು ನೀಡುವ ಬಗ್ಗೆ.

*ನಿರ್ಣಯ:*

ಡಾ. ಚಂದರಗಿ, ಜಂಟಿ ನಿರ್ದೇಶಕರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಮಾತನಾಡಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿ ಮಾಡಿರುವುದರಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 04 ವರ್ಷದ ಸ್ನಾತಕ ಹಾನರ್ಸ್ ಕೋರ್ಸುಗಳಾದ B.com (Honours), BA (Honours), B.Sc (Honours), BBA (Honours), BCA (Honours) ಮುಂತಾದ ಹೊಸ ಕೋರ್ಸುಗಳನ್ನು ಆರಂಭಿಸುವುದು ಅತ್ಯವಶ್ಯಕವಾಗಿದೆ. ಈ ಎಲ್ಲಾ ಕೋರ್ಸುಗಳಿಗೆ ಕಟ್ಟಡ, ಪ್ರಯೋಗಾಲಯ ಹಾಗೂ ಇತರ ಮೂಲ ಸೌಕರ್ಯಗಳನ್ನು ವಿಶ್ವವಿದ್ಯಾಲಯ ಒದಗಿಸಬೇಕಾಗುತ್ತದೆ. ಈ ಕಾರಣಕ್ಕೆ ವಿಶ್ವವಿದ್ಯಾಲಯಕ್ಕೆ ಇನ್ನೂ ಹೆಚ್ಚಿನ ಜಮೀನು ಅವಶ್ಯಕವಾಗಿದೆ. ಆದುದರಿಂದ, ವಿಶ್ವವಿದ್ಯಾಲಯ ಜಮೀನನ್ನು ಬೇರೆ ಸಂಸ್ಥೆಗಳಿಗೆ ನೀಡುವುದು ಒಳಿತಲ್ಲ ಎಂದು ಅಭಿಪ್ರಾಯ ಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯ ಈಗಾಗಲೇ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಗೆ 23 ಎಕರೆ ಜಮೀನನ್ನು ನೀಡಿರುವುದರಿಂದ, ನೀಡಿದ್ದ ಜಮೀನನ್ನೇ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬಹುದಾಗಿದೆ. ವಿಶ್ವವಿದ್ಯಾಲಯದ ತ್ರಿಭಜನೆಯ ನಂತರ ಸೆಂಟ್ರಲ್ ಕಾಲೇಜು ಆವರಣದಲ್ಲಿದ್ದ ಸ್ನಾತಕೋತ್ತರ ವಿಭಾಗಗಳನ್ನು ಜ್ಞಾನಭಾರತಿಗೆ ಸ್ಥಳಾಂತರಿಸಲಾಗಿದ್ದು, ಅವುಗಳಿಗೆ ಇನ್ನೂ ಕಟ್ಟಡ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸದಿರುವ ಕಾರಣ, ಸದರಿ ವಿಭಾಗಗಳಿಗೆ ಪ್ರತ್ಯೇಕ ಕಟ್ಟಡ ನಿರ್ಮಾಣ ಮಾಡಲು ವಿಶ್ವವಿದ್ಯಾಲಯದ ಆವರಣದಲ್ಲಿ ಜಾಗದ ಅವಶ್ಯಕತೆ ಇದ್ದು ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಿರುವುದರಿಂದ ವಿಶ್ವವಿದ್ಯಾಲಯದಲ್ಲಿ 04 ವರ್ಷಗಳ ಹಾನರ್ಸ್ ಕೋರ್ಸುಗಳನ್ನು ಪ್ರಾರಂಭಿಸಬೇಕಾಗಿರುವುದರಿಂದ ಅವುಗಳಿಗೆ ಕಟ್ಟಡ, ಪ್ರಯೋಗಾಲಯ, ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಹಾಗೂ ಇತರ ಮೂಲ ಸೌಕರ್ಯಗಳನ್ನು ಕಲ್ಪಿಸುವ ಅವಶ್ಯಕತೆ ಇರುವುದರಿಂದ ಹಾಗೂ ವಿಶ್ವವಿದ್ಯಾಲಯದ ಮುಂದಿನ ಬೆಳವಣಿಗೆಗೆ ಸಾಕಷ್ಟು ಜಮೀನು ಬೇಕಾಗಿರುವುದರಿಂದ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ

ಆವರಣದಲ್ಲಿ ಸುಮಾರು 400 ಎಕರೆಗೂ ಹೆಚ್ಚಿನ ಜಾಗದಲ್ಲಿ ಜೈವಿಕ ಉದ್ಯಾನವನವನ್ನು (ಬಯೋಪಾರ್ಕ್, ಅರೋಮಾ ಪಾರ್ಕ್) ಅಭಿವೃದ್ಧಿಗೊಳಿಸಿರುವುದರಿಂದ ಹಾಗೂ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯು ಜ್ಞಾನಭಾರತಿ ಆವರಣದ ಇತರ 397 ಎಕರೆ 09 ಗುಂಟೆ ಜಮೀನನ್ನು ಅರಣ್ಯ ಪ್ರದೇಶ ಎಂದು ಘೋಷಿಸಿಕೊಂಡಿದ್ದು, ವಿಶ್ವವಿದ್ಯಾಲಯದ ಅಭಿವೃದ್ಧಿಗೇ ಜಾಗ ಇಲ್ಲದಂತಾಗಿದೆ. ಪ್ರಸ್ತುತ ಇತರೆ ಸಂಸ್ಥೆಗಳಿಗೆ ಈಗಾಗಲೇ ಜಮೀನು ನೀಡಿರುವುದನ್ನು ಪ್ರಶ್ನಿಸಿ ಸದರಿ ಜಾಗಗಳು ಬಯೋಪಾರ್ಕ್ ಎಂದು ಸಾರ್ವಜನಿಕ ಹಿತಾಸಕ್ತಿಯನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಿಂದ ಮಧ್ಯಂತರ ತಡೆಯಾಜ್ಞೆ ಆದೇಶ ಬಂದಿದೆ. ಮುಂದುವರೆದು, ವಿಶ್ವವಿದ್ಯಾಲಯದ ಕೆಲವು ಜಾಗ ಒತ್ತುವರಿಯಾಗಿ ಲಿಟಿಗೇಷನ್ ನಲ್ಲಿ ಇರುವುದರಿಂದ ಬೆಂಗಳೂರು ವಿಶ್ವವಿದ್ಯಾಲಯವು ಇತರೇ ಸಂಸ್ಥೆಗಳಿಗೆ ಜಮೀನು ನೀಡುವ ಸ್ಥಿತಿಯಲ್ಲಿ ಇರುವುದಿಲ್ಲ.

ಬೆಂಗಳೂರು ವಿಶ್ವವಿದ್ಯಾಲಯದ ಭವಿಷ್ಯದ ವಿಸ್ತರಣೆಗೆ ಜಮೀನಿನ ಅವಶ್ಯಕತೆ ಇರುವ ಕಾರಣ ಈಗಾಗಲೇ ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಜೈವಿಕ ಉದ್ಯಾನವನ ಅಭಿವೃದ್ಧಿಗೊಳಿಸಿರುವುದರಿಂದ ಹಾಗೂ ಮೇಲ್ಕಂಡ ಅಂಶಗಳ ಹಿನ್ನಲೆಯಿಂದಾಗಿ ಬೆಂಗಳೂರು ನ್ಯಾಷನಲ್ 'ಲಾ' ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಗೆ ಇನ್ನೂ ಹೆಚ್ಚಿನ ಜಮೀನನ್ನು ನೀಡಲು ಸಾಧ್ಯವಾಗುವುದಿಲ್ಲವೆಂದು ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 11:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ಬೆಂಗಳೂರು ವಿದ್ಯುತ್ ಕಂಪನಿ ವತಿಯಿಂದ 66/11 ಕೆ.ವಿ. ವಿದ್ಯುತ್ ಉಪ-ಕೇಂದ್ರ ಸ್ಥಾಪನೆ ಮಾಡಲು ಜ್ಞಾನಭಾರತಿ ವಿಶ್ವವಿದ್ಯಾಲಯ ಆವರಣದಲ್ಲಿ 50 X 50 ಮೀಟರ್ ಜಾಗವನ್ನು ನೀಡುವ ಬಗ್ಗೆ.

*ನಿರ್ಣಯ:*

ಈಗಾಗಲೇ ನಿರ್ಣಯಿಸಿರುವಂತೆ ವಿಷಯ ಸಂಖ್ಯೆ 10 ರಲ್ಲಿ ತಿಳಿಸಿರುವ ವಾಸ್ತವ ಅಂಶಗಳಿಂದಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇವರಿಗೆ ಜಮೀನು ನೀಡಲು ಸಾಧ್ಯವಾಗುವುದಿಲ್ಲವೆಂದು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 12:** To consider Institution of Endowment Cash Prize in the name of Department of Social Work, Bangalore University for awarding Cash Prize to a girl student securing highest marks in (M.S.W).

Lyuthia Mugo
07/07/2022

***Resolution:***

The Syndicate resolved to approve the institution of endowment in the name of "Department of Social Work" for award of Cash prize out of the interest accrued on endowment to a girl student securing highest marks in during the Annual convocation as per section 29 (2) (r) of KSU Act 2000.



Item No. 13: Procurement of answer booklets to the students admitted during the academic year 2021-22 under Unified University & College Management System (UUCMS) and Non-core OMR sheets-reg.

***Resolution:***

The Registrar (Evaluation) informed the Syndicate that due to urgency the period of old tender had been extended for one more year, Answer booklets and non-core OMR sheets required for the examinations under UUCMS for the academic year 2021-22 have been procured. He requested to ratify the same.

Dr. Govindaraju suggested to get prior approval of the Syndicate before making such purchases and the above practice should not be repeated in future.

After detailed discussions, the Syndicate resolved to ratify the action taken by the University in purchasing answer booklets and non-core OMR sheets for the examinations of 2021-22 academic year.



Item No. 14: Draft statutes for establishment of New Departments of Studies and redeployment of Teaching and Non-teaching posts for the Centre for Women Studies, Department of Apparel Technology and Management, Department of Electronic Media, Department of Master of Computer Science and Applications and Department of Visual Arts of Bangalore University.

***Resolution:***

The Syndicate resolved to approve the Statutes made under section 41(2) of KSU Act 2000, for establishment of Departments of Studies and redeployment of Teaching and Non-teaching posts for the Centre for Women Studies, Department of Apparel Technology and Management, Department of Electronic Media, Department of Master of Computer Science and Applications and Department of Visual Arts of Bangalore University.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 15:** 2021–22 ನೇ ಸಾಲಿಗೆ ಬೆಂಗಳೂರು ಅಮಿರ್ತ ಕಲೆ ಮತ್ತು ವಿಜ್ಞಾನ ಕಾಲೇಜಿಗೆ ಎಂ.ಟಿ.ಟಿ.ಎಂ 5 ವರ್ಷದ ಇಂಟಿಗ್ರೇಟೆಡ್ ಕೋರ್ಸಿನ ಸಂಯೋಜನೆ ನೀಡುವ ಕುರಿತು ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿರುವ ತಿದ್ದುಪಡಿಯನ್ನು ಪರಿಗಣಿಸುವ ಬಗ್ಗೆ.

***ನಿರ್ಣಯ:***

2021–22 ನೇ ಸಾಲಿಗೆ ಬೆಂಗಳೂರು ಅಮಿರ್ತ ಕಲೆ ಮತ್ತು ವಿಜ್ಞಾನ ಕಾಲೇಜಿಗೆ ಎಂ.ಟಿ.ಟಿ.ಎಂ 5 ವರ್ಷದ ಇಂಟಿಗ್ರೇಟೆಡ್ ಕೋರ್ಸಿನ ಸಂಯೋಜನೆ ನೀಡುವ ಬಗ್ಗೆ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿರುವ ತಿದ್ದುಪಡಿ ವರದಿಯನ್ನು ಸಿಂಡಿಕೇಟ್ ಕೆ.ಎಸ್.ಯು ಅಧಿನಿಯಮ ಪ್ರಕರಣ 59 (9) ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 16:** 2021–22ನೇ ಸಾಲಿಗೆ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸದಂತಹ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

***ನಿರ್ಣಯ:***

2021–22 ನೇ ಸಾಲಿಗೆ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸದಂತಹ ಕಾಲೇಜುಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ ನಂತರವೂ ಸಂಯೋಜನೆಯನ್ನು ಮುಂದುರೆಸಲು ಸದರಿ ಕಾಲೇಜುಗಳು ಆಸಕ್ತಿ ವ್ಯಕ್ತಪಡಿಸದ ಕಾರಣ, ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ 09 ಕಾಲೇಜುಗಳ ಸಂಯೋಜನೆಯನ್ನು ಕೆ.ಎಸ್.ಯು ಅಧಿನಿಯಮ ಪ್ರಕರಣ 63 ರ ಉಪ ಪ್ರಕರಣ 3, 4 ಮತ್ತು 5 ರ ಅಡಿಯಲ್ಲಿ ಪರಿಗಣಿಸಿ, 2021–22 ನೇ ಸಾಲಿನಿಂದ ಜಾರಿಗೆ ಬರುವಂತೆ ಸದರಿ 09 ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸಲು ಸಿಂಡಿಕೇಟ್ ನಿರ್ಣಯಿಸಿತು.

Cynthia Menezes 07/07/2022

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 17:** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೈಗೊಂಡಿರುವ ಒಟ್ಟು 51 (ಐವತ್ತೊಂದು) "Minor and Major Project" ಅನ್ನು ಅನುಮೋದಿಸುವ ಕುರಿತು.

*ನಿರ್ಣಯ:*

ಚರ್ಚೆಯ ನಂತರ ಪರಾಮರ್ಶಿತ ಟಿಪ್ಪಣಿಯಲ್ಲಿ ಮಂಡಿಸಿರುವಂತೆ ವಿಶ್ವವಿದ್ಯಾಲಯದ ಶಿಕ್ಷಕರಿಗೆ 2ನೇ ಹಂತದಲ್ಲಿ ಮಂಜೂರು ಮಾಡಿರುವ "Minor and Major Project" ಗಳಿಗೆ ಮೊದಲ ಕಂತಿನ ಅನುದಾನ ಹಾಗೂ ಮೊದಲ ಹಂತದಲ್ಲಿ ಶಿಕ್ಷಕರಿಗೆ ಮಂಜೂರಾಗಿರುವ ಪ್ರಾಜೆಕ್ಟ್‌ಗಳಿಗೆ 2ನೇ ಕಂತಿನ ಅನುದಾನ ಮಂಜೂರು ಮಾಡುವ ಬಗ್ಗೆ ಪ್ರೊ. ಟಿ.ವಿ ರಾಜುರವರ ನೇತೃತ್ವದಲ್ಲಿ ರಚಿಸಿರುವ Academic Development Committee ಇಂದ ಶಿಫಾರಸ್ಸು ಪಡೆದು ನಂತರ ಧನಸಹಾಯ ಮಂಜೂರು ಮಾಡಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 18:** ವಿದ್ಯಾರ್ಥಿನಿಲಯಗಳ ಸುಧಾರಣಾ ಸಮಿತಿ ಸಭೆಯ ನಡಾವಳಿಯಲ್ಲಿ ಮುಂದೂಡಲ್ಪಟ್ಟ ವಿಷಯಗಳನ್ನು ಅನುಮೋದಿಸುವ ಬಗ್ಗೆ.

*ನಿರ್ಣಯ:*

ದಿನಾಂಕ 07.08.2021 ರಂದು ಜರುಗಿದ ವಿದ್ಯಾರ್ಥಿ ನಿಲಯಗಳ ಸುಧಾರಣಾ ಸಮಿತಿಯ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಲಾಯಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 19:** ಬೆಂಗಳೂರು ವಿಶ್ವವಿದ್ಯಾಲಯದ ಯು.ವಿ.ಸಿ.ಇ ಆವರಣದಲ್ಲಿರುವ ಪುರುಷ ವಿದ್ಯಾರ್ಥಿನಿಲಯಕ್ಕೆ ಜಲಮಂಡಳಿಯು ನೀರು ಸರಬರಾಜಿಗೆ ಅಳವಡಿಸಿರುವ ಆರ್.ಆರ್ ಸಂಖ್ಯೆ.ಸಿ–139380/ಎಜಿ–125 ರ ಬಾಕಿ ಪಾವತಿಯ ಬಗ್ಗೆ.

*ನಿರ್ಣಯ:*

ಬೆಂಗಳೂರು ವಿಶ್ವವಿದ್ಯಾಲಯದ ಯು.ವಿ.ಸಿ.ಇ ಆವರಣದಲ್ಲಿರುವ ಪುರುಷ ವಿದ್ಯಾರ್ಥಿನಿಲಯಕ್ಕೆ ಜಲಮಂಡಳಿಯು ನೀರು ಸರಬರಾಜಿಗೆ ಅಳವಡಿಸಿರುವ ಆರ್.ಆರ್ ಸಂಖ್ಯೆ. ಸಿ–139380/ಎಜಿ–125 ರ ಬಾಕಿ ಇರುವ ನೀರಿನ ಬಿಲ್ ಮೊತ್ತವನ್ನು ಪಾವತಿಸಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 20:** ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಇಬ್ಬರು ಶುಶ್ರೂಷಕಿಯರುಗಳ ಸೇವಾವಧಿಯನ್ನು ಮುಂದುವರೆಸುವ ಬಗ್ಗೆ.

Cynthia Menezes 07/07/2022

ನಿರ್ಣಯ:

ಬೆಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಇಬ್ಬರು ಶುಶ್ರೂಷಕಿಯರುಗಳ ಸೇವಾವಧಿಯನ್ನು ಮೂರು ಕಾರ್ಯನಿರತ ದಿವಸಗಳ ಬಿಡುವು ನೀಡಿ ಪ್ರಸ್ತುತ ಇರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮುಂದಿನ ಒಂದು ವರ್ಷದ ಅವಧಿಗೆ ಮುಂದುವರೆಸಲು ಹಾಗೂ ಇವರ ಸಂಭವನೆಯನ್ನು ರೂ. 30,000/- ದಿಂದ 35,000/- ರೂಗಳಿಗೆ ಹೆಚ್ಚಿಸಲು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 164th meeting of the Syndicate held on 27.06.2022*

Item No. 21: Request for sending money to establish isotope Hydrology basis laboratory for multi disciplinary research on water issue-reg.

***Resolution:***

ವಿಷಯವನ್ನು ಮುಂದೂಡಲಾಯಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 22:** ಶ್ರೀ ಮಲ್ಲಾರಾಧ್ಯ.ಎಸ್, ಅಧೀಕ್ಷಕರು, ಹಣಕಾಸು ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ನಿಯ ವೈದ್ಯಕೀಯ ವೆಚ್ಚವನ್ನು ಮತ್ತೊಮ್ಮೆ ಪರಿಶೀಲಿಸಿ ಬಾಕಿ ಉಳಿದಿರುವ ಮೊತ್ತ ಮರುಪಾವತಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ ವೈದ್ಯಕೀಯ ವೆಚ್ಚದ ಉಳಿಕೆ ಮೊತ್ತವನ್ನು ಮರುಪಾವತಿ ಮಾಡುವ ಸಂಬಂಧ ನಿಯಮಾವಳಿಗಳಲ್ಲಿ ಅವಕಾಶವಿಲ್ಲದ ಕಾರಣ ಮನವಿಯನ್ನು ಪರಿಗಣಿಸಲಾಗುವುದಿಲ್ಲವೆಂದು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 23:** ದಿನಾಂಕ 25.11.2021 ರಂದು ನಡೆದ ಆಕಾರ್ಯ ವಿಚಾರಣಾ ಸಮಿತಿಯ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ವಿಜ್ಞಾನ ನಿಕಾಯದ (ಬಿ.ಸಿ.ಎ ಪರೀಕ್ಷೆ) ಸಂಬಂಧಿಸಿದಂತೆ ದಿನಾಂಕ 25.11.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 77(2) ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 24:** ದಿನಾಂಕ 25.11.2021 ರಂದು ನಡೆದ ಆಕಾರ್ಯ ವಿಚಾರಣಾ ಸಮಿತಿಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

Cynthia Menezes
27/07/2022

*ನಿರ್ಣಯ:*

ಚರ್ಚೆಯ ನಂತರ, ವಿಜ್ಞಾನ ನಿಕಾಯದ (ಬಿ.ಎಸ್ಸಿ ಪರೀಕ್ಷೆ) ಸಂಬಂಧಿಸಿದಂತೆ ದಿನಾಂಕ 25.11.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ, ಪ್ರಕರಣ 77(2) ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 25:** ದಿನಾಂಕ 15.12.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ ದಿನಾಂಕ 15.12.2021 ರಂದು ನಡೆದ ಕಲಾ ನಿಕಾಯಕ್ಕೆ ಸಂಬಂಧಿಸಿದಂತೆ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ, ಪ್ರಕರಣ 77(2) ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 26:** ದಿನಾಂಕ 15.12.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ ಕಲಾ ನಿಕಾಯಕ್ಕೆ ಸಂಬಂಧಿಸಿದಂತೆ ದಿನಾಂಕ 15.12.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ, ಪ್ರಕರಣ 77(2) ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 27:** ದಿನಾಂಕ 19.11.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಪರಿಗಣಿಸುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ ವಾಣಿಜ್ಯ ನಿಕಾಯಕ್ಕೆ ಸಂಬಂಧಿಸಿದಂತೆ ದಿನಾಂಕ 19.11.2021 ರಂದು ನಡೆದ ಅಕಾರ್ಯ ವಿಚಾರಣಾ ಸಮಿತಿ ಸಭೆಯ ನಡಾವಳಿ ಹಾಗೂ ಶಿಫಾರಸ್ಸುಗಳನ್ನು ಸಿಂಡಿಕೇಟ್ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ದ, ಪ್ರಕರಣ 77(2) ರ ಅಡಿಯಲ್ಲಿ ಪರಿಗಣಿಸಿ ಅನುಮೋದಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 28:** ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರು/ಸಂಯೋಜಕರನ್ನು ನೇಮಕ ಮಾಡುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯದ ಕೆಳಕಂಡ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರುಗಳನ್ನು ಅವರ ಹೆಸರುಗಳ ಮುಂದೆ ನಮೂದಿಸಿರುವ ವಿಭಾಗಗಳಿಗೆ ಅಧ್ಯಕ್ಷರು/ಸಂಯೋಜಕರುಗಳನ್ನಾಗಿ ನೇಮಿಸಲು ಸಿಂಡಿಕೇಟ್ ಅನುಮೋದಿಸಿತು:

| ಕ್ರ.ಸಂ. | ಹೆಸರು | ವಿಭಾಗ | ಅವಧಿ |
|---|---|---|---|
| 1. | ಡಾ. ಪಿ ಪವನ್ ಕುಮಾರ್ ಸಹ ಪ್ರಾಧ್ಯಾಪಕರು | ವಾಸ್ತುಶಿಲ್ಪ ವಿಭಾಗ | ದಿನಾಂಕ 11.03.2022 ಎರಡು ವರ್ಷಗಳ ಅವಧಿಗೆ |
| 2. | ಡೀನರು, ಕಲಾ ನಿಕಾಯ | ದೃಶ್ಯಕಲಾ ವಿಭಾಗ | ದಿನಾಂಕ 01.07.2022 ರಿಂದ ಮುಂದಿನ ಆದೇಶದವರೆಗೆ |
| 3. | ಡಾ. ಸವಿತಾ ಜಾನಕಿ ರಾಮನ್ ಪ್ರಾಧ್ಯಾಪಕರು | ಸೂಕ್ಷ್ಮ ಜೀವಶಾಸ್ತ್ರ ಮತ್ತು ಜೀವತಂತ್ರ ಜ್ಞಾನ ವಿಭಾಗ | ದಿನಾಂಕ 01.07.2022 ರಿಂದ ಎರಡು ವರ್ಷಗಳ ಅವಧಿಗೆ |
| 4. | ಡಾ. ಬಿ.ಪಿ ಹರೀಶ್ ಪ್ರಾಧ್ಯಾಪಕರು | ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ಇಂಜಿನಿಯರಿಂಗ್ ವಿಭಾಗ | ದಿನಾಂಕ 01.07.2022 ರಿಂದ ಎರಡು ವರ್ಷಗಳ ಅವಧಿಗೆ |
| 5. | ಡಾ. ಸಿ.ಎಸ್ ಕರಿಗಾರ್ ಪ್ರಾಧ್ಯಾಪಕರು | ಜೀವ–ರಸಾಯನಶಾಸ್ತ್ರ ವಿಭಾಗ | ದಿನಾಂಕ 13.08.2022 ರಿಂದ ಎರಡು ವರ್ಷಗಳ ಅವಧಿಗೆ |
| 6. | ಡಾ. ಮಂಜೇಶ್ ಪ್ರಾಧ್ಯಾಪಕರು | ವಿದ್ಯುನ್ಮಾನ ವಿಜ್ಞಾನ ವಿಭಾಗ | ದಿನಾಂಕ 13.08.2022 ರಿಂದ ಎರಡು ವರ್ಷಗಳ ಅವಧಿಗೆ |
| 7. | ಡಾ. ಸಂಜೀವರಾಜ ಪ್ರಾಧ್ಯಾಪಕರು | ಸಂವಹನ ವಿಭಾಗ | ದಿನಾಂಕ 28.09.2022 ರಿಂದ ಎರಡು ವರ್ಷಗಳ ಅವಧಿಗೆ |
| 8. | ಡಾ. ಆರ್. ಗೀತಾ ಪ್ರಾಧ್ಯಾಪಕರು | ಇಂಗ್ಲೀಷ್ ವಿಭಾಗ | 28.09.2022 ರಿಂದ ಎರಡು ವರ್ಷಗಳ ಅವಧಿಗೆ |

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 29:** ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ 2013–14 ನೇ ಸಾಲಿನ ಸಾಮಾನ್ಯ ಮತ್ತು ಸಾಮಾಜಿಕ ವಲಯದ ವರದಿಯಲ್ಲಿನ ಕಂಡಿಕೆ 4.06 ರಲ್ಲಿ ಕೋಲಾರ ಸ್ನಾತಕೋತ್ತರ ಕೇಂದ್ರ ಕಟ್ಟಡಕ್ಕೆ ನಿವೇಶನ ಮತ್ತು ಕಟ್ಟಡದ ವಿನ್ಯಾಸವನ್ನು ಹಸ್ತಾಂತರಿಸುವಲ್ಲಿ ಸಾಮಾನ್ಯ ವಿಳಂಬವು ಗುತ್ತಿಗೆದಾರರನ್ನು ಮಧ್ಯದಲ್ಲಿಯೇ ಕಾಮಗಾರಿಯನ್ನು ಸ್ಥಗಿತಗೊಳಿಸುವಲ್ಲಿ ಮತ್ತು ರೂ. 1.95 ಕೋಟಿ ವೆಚ್ಚವು ಅಧಿಕವಾಗಿರುವ ವಿಷಯದ ಬಗ್ಗೆ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Cynthia [signature] 07/07/2022

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 30:** ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡಿರುವುದಕ್ಕೆ ಅನುದಾನ ಮಂಜೂರು ಮಾಡುವ ಬಗ್ಗೆ

*ನಿರ್ಣಯ:*

ಚರ್ಚೆಯ ನಂತರ ಪರಾಮರ್ಶಿತ ಟಿಪ್ಪಣಿಯಲ್ಲಿ ನಮೂದಿಸಿರುವ 2020–21 ಮತ್ತು 2021–22ನೇ ಸಾಲಿನಲ್ಲಿ ವಿವಿಧ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದಿರುವ 11 ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯ ನೀಡಿರುವುದಕ್ಕೆ ಅನುದಾನ ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 31:,** ದಿವಂಗತ ಶ್ರೀ ರಾಮಕೃಷ್ಣ.ಪಿ, ಗ್ರೂಪ್ 'ಡಿ' ನೌಕರರು, ದೈಹಿಕ ಶಿಕ್ಷಣ ನಿರ್ದೇಶನಾಲಯ, ಇವರ ಪುತ್ರ ಶ್ರೀ ಮಂಜುನಾಥ್.ಆರ್ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ, ದಿವಂಗತ ಶ್ರೀ ರಾಮಕೃಷ್ಣ.ಪಿ, ಗ್ರೂಪ್ 'ಡಿ' ದೈಹಿಕ ಶಿಕ್ಷಣ ನಿರ್ದೇಶನಾಲಯ, ಇವರ ಪುತ್ರ ಶ್ರೀ ಮಂಜುನಾಥ್.ಆರ್, ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿ ಎದುರು ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996ರ ಪ್ರಕಾರ ನೇಮಕ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

***Proceedings of the 164th meeting of the Syndicate held on 27.06.2022***

**ವಿಷಯ ಸಂಖ್ಯೆ 32:** ದಿವಂಗತ ಶ್ರೀ ಗಣೇಶ್.ಎನ್, ಅನುಚರರು, ಸಿವಿಲ್ ಇಂಜಿನಿಯರಿಂಗ್ ವಿಭಾಗ ಇವರ ಪುತ್ರ ಶ್ರೀ ಪುನೀತಕುಮಾರ ಕೆ.ಜಿ, ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಪರಿಗಣಿಸುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ, ದಿವಂಗತ ಶ್ರೀ ಗಣೇಶ್.ಎನ್, ಅನುಚರರು, ಸಿವಿಲ್ ಇಂಜಿನಿಯರಿಂಗ್ ವಿಭಾಗ ಇವರ ಪುತ್ರ ಶ್ರೀ ಪುನೀತಕುಮಾರ ಕೆ.ಜಿ, ಅವರನ್ನು ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾಲಯದಲ್ಲಿ, ನೇರ ನೇಮಕಾತಿ ಎದುರು ಖಾಲಿ ಇರುವ ಗ್ರೂಪ್ 'ಡಿ' ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (Appointment on Compassionate Grounds) ನಿಯಮ 1996 ರ ಪ್ರಕಾರ ನೇಮಕ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

Cynthia Menezes
07/07/2022

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 33:** ಬೋಧಕೇತರ ಸಿಬ್ಬಂದಿಗೆ ದಿನ ಭತ್ಯೆ/ಸಾರಿಗೆ ಭತ್ಯೆಗಳನ್ನು ಪರಿಷ್ಕರಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 34:** ಪ್ರಸಾರಾಂಗ ಪ್ರಕಟಣೆಗಳನ್ನು ಮಾರಾಟ ಮಾಡಲು ಶ್ರೀ ಸಾಯಿ ಏಜೆನ್ಸಿ ಸಂಸ್ಥೆ ಹಾಗೂ ಇತರ ಆಸಕ್ತ ಸಂಸ್ಥೆಗಳಿಗೆ ಅನುಮತಿ ನೀಡುವ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಣೆಗಳನ್ನು ಮಾರಾಟ ಮಾಡಲು ಶ್ರೀ ಸಾಯಿ ಏಜೆನ್ಸಿ ಸಂಸ್ಥೆ ಹಾಗೂ ಇತರ ಆಸಕ್ತ ಸಂಸ್ಥೆಗಳಿಗೆ ಅನುಮತಿ ನೀಡಲು ಸಿಂಡಿಕೇಟ್ ನಿರ್ಣಯಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 35:** ಕೃಷಿ ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯ ಇವರ ಮಧ್ಯೆ ಒಡಂಬಡಿಕೆ (MoU) ಮಾಡಿಕೊಳ್ಳುವ ಕುರಿತು.

*ನಿರ್ಣಯ:*

ಶ್ರೀ ವಿ.ಸಿ. ಜಯರಾಮಯ್ಯ, ರೇಷ್ಮೆ ವಿಭಾಗ/ಜೀವ ವಿಜ್ಞಾನ ವಿಭಾಗ ಇವರು ತಮ್ಮ ಪಿ.ಎಚ್.ಡಿ ಸಂಶೋಧನಾ ಪ್ರಬಂಧ ಪೂರ್ಣಗೊಳಿಸಲನುವಾಗಲು ಇವರಿಗೆ ಮಾರ್ಗದರ್ಶಕರಾಗಿ ಡಾ. ಎಸ್. ರಮೇಶ್, ಪ್ರಾಧ್ಯಾಪಕರು, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇವರನ್ನು ನೇಮಕ ಮಾಡಲು ಹಾಗೂ ಈ ಸಂಬಂಧ ಸಲ್ಲಿಸಿರುವ ಒಡಂಬಡಿಕೆಯನ್ನು ಸಿಂಡಿಕೇಟ್ ಅನುಮೋದಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 36:** ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಕೇತರ ನೌಕರರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಕ್ರೀಡಾಕೂಟ ಹಾಗೂ ವಿಶ್ವವಿದ್ಯಾಲಯದ ದಿನಾಚರಣೆಯನ್ನು ಆಚರಿಸುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 37:** ಶ್ರೀ ವೆಂಕಟೇಶ್.ಎನ್, ಗ್ರೂಪ್ ಡಿ. Forensic Science Department of Zoology ಇವರ ಅನಧಿಕೃತ ಗೈರುಹಾಜರಿಯ ಬಗ್ಗೆ ನಡೆಸಿದ ವಿಚಾರಣಾ ವರದಿಯನ್ನಾಧರಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

Cynthia Menezes 07/07/2022

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 38:** ಶ್ರೀ ಖಲೀಲ್ ಅಹಮ್ಮದ್, ಎ.ಎನ್ (ನಿವೃತ್ತಿ) ಇವರಿಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿಯ ಬಾಕಿ ವೇತನವನ್ನು ಮಂಜೂರು ಮಾಡುವ ಕುರಿತು.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 39:** Pan india Ride Celebrating "Azadi ka Amruth Mahotsav"on behalf of Bangalore University.

***Resolution:***

Syndicate resolved not to consider the request of Sri R. Chiranthana, for financial support to Pan India Ride attempt as there is no provision to extend support for such activities. The concerned employee may avail EL / Commutted leave at his credit to take up the above activity.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 40:** ಗ್ರಂಥಾಲಯ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

*ನಿರ್ಣಯ:*

ಚರ್ಚೆಯ ನಂತರ ಗ್ರಂಥಾಲಯ ಸಮಿತಿಯು ಮತ್ತೊಮ್ಮೆ ಸಭೆ ನಡೆಸಿ ವರದಿಯನ್ನು ಸಿದ್ಧಪಡಿಸಿ ಸಿಂಡಿಕೇಟ್ ಮುಂದೆ ಮಂಡಿಸಬೇಕೆಂದು ನಿರ್ಣಯಿಸಲಾಯಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 41:** ಆಚಾರ್ಯ ಬೆಂಗಳೂರು 'ಬಿ' ಸ್ಕೂಲ್‌ನ MBA (Business Analytics) ಕೋರ್ಸಿನ ಬಗ್ಗೆ ಸಲ್ಲಿಸಿರುವ ಸ್ಥಳೀಯ ವಿಚಾರಣಾ ಸಮಿತಿಯ ವರದಿ ಬಗ್ಗೆ.

*ನಿರ್ಣಯ:*

ಚರ್ಚೆಯ ನಂತರ ಆಚಾರ್ಯ ಬೆಂಗಳೂರು 'ಬಿ' ಸ್ಕೂಲ್ ಇಲ್ಲಿ MBA (Business Analytics) ಕೋರ್ಸನ್ನು 2021–22ನೇ ಸಾಲಿನಿಂದ ಪ್ರಾರಂಭಿಸುವ ಬಗ್ಗೆ ಸಲ್ಲಿಸಿರುವ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ಎ.ಐ.ಸಿ.ಟಿಯು ಮೇಲ್ಕಂಡ ಕಾಲೇಜಿಗೆ ಸದರಿ ಕೋರ್ಸುಗಳನ್ನು 2021–22ನೇ ಸಾಲಿಗೆ ಮಂಜೂರು ಮಾಡಿದ್ದು, ಕರ್ನಾಟಕ ಸರ್ಕಾರದಿಂದಲೂ ಸಹ 2021–22ನೇ ಸಾಲಿನ MBA/MCA ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಸದರಿ ಕಾಲೇಜಿನ ಎದುರು MBA (Business Analytics) -60 ವಿದ್ಯಾರ್ಥಿ ಪ್ರಮಾಣ ಎಂದು ಅಧಿಸೂಚಿಸಿದೆ. ಅದರನುಸಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿದ್ಯಾರ್ಥಿಗಳನ್ನು ಮೇಲ್ಕಂಡ ಕಾಲೇಜಿಗೆ ಪ್ರಾಯೋಜಿಸಿದೆ. ಆದ್ದರಿಂದ ಸದರಿ ಕೋರ್ಸಿಗೆ ಆಗಿರುವ ಪ್ರವೇಶಾತಿಯನ್ನು ಷರತ್ತುಬದ್ಧವಾಗಿ ಅನುಮೋದಿಸಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 42:** ಡಾ. ಎಸ್.ಎಂ. ದಿಲೀಪ್ ಕುಮಾರ್, ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗ, ಡಾ. ಬಿ. ಈರಯ್ಯ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಮತ್ತು ಡಾ. ಬಿ.ಪಿ ಹರಿಣಿ, ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ವಿಭಾಗ ಇವರನ್ನು ಹಿಂದಿನ ಡಿಫೈನ್ಡ್ ಯೋಜನೆಯಲ್ಲಿ ಪರಿಗಣಿಸಲು ಹಾಗೂ ಅವರಿಗೆ ವೇತನ ರಕ್ಷಣೆ ನೀಡಲು ಕೋರಿರುವ ಬಗ್ಗೆ.

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 164th meeting of the Syndicate held on 27.06.2022*

**ವಿಷಯ ಸಂಖ್ಯೆ 43:** Construction of the recommendations of selection Committee with regard to retrospective date of promotion of Dr. Parameshwar V. Pandit, Department of Statistics, Bangalore University, Bengaluru

*ನಿರ್ಣಯ:*

ವಿಷಯವನ್ನು ಮುಂದೂಡಲಾಯಿತು.

*Proceedings of the 164th meeting of the Syndicate held on 27.06.2022*

